**ದಿನಾಂಕಃ 31.01.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎನ್ ಜೆ ವಕೀಲರಿಂದಃ

ಪ್ರತಿವಾದಿಗಳು ನಿಮಗೆ ಯಾವ ರೀತಿ ಸಂಬಂಧಿಕರಾಗಿರುತ್ತಾರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಅವರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ಈ ದಾವೆಯನ್ನು ನಾರಾಯಣಪ್ಪ ಮತ್ತು ನಂಜಕ್ಕ ರವರ ವಿರುದ್ಧ ಹೂಡಿರುತ್ತಾರೆ. ನನ್ನ ತಂದೆ ಈ ದಾವೆಯನ್ನು ಸರ್ವೆ ನಂ.68 ರಲ್ಲಿನ 8 ಎಕರೆ 28 ಗುಂಟೆಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ಸದರಿ ಜಮೀನಿನ ಪೂರ್ವಕ್ಕೆಃ ರಾಮಯ್ಯನವರ ಜಮೀನು, ಪಶ್ಚಿಮಕ್ಕೆಃ ಕುಂಬಾರ ತಾಡಣ್ಣ ರವರ ಜಮೀನು, ಉತ್ತರಕ್ಕೆಃ ರಂಗಶ್ಯಾಮಯ್ಯರವರ ಜಮೀನು, ದಕ್ಷಿಣಕ್ಕೆಃ ಮುದ್ದರಾಮಯ್ಯರವರ ಜಮೀನು ಇರುತ್ತದೆ. ದಾವಾ ಸ್ವತ್ತು ನಿಮ್ಮ ತಂದೆಯ ಮಾಲೀಕತ್ವಕ್ಕೆ ಸೇರಿದ್ದು ಎಂಬುದಕ್ಕೆ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಕಂದಾಯ ಪಾವತಿ ರಶೀದಿಗಳು ಮತ್ತು ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ, ಆದರೆ ಸದರಿ ದಾಖಲೆಗಳ ಹೆಸರುಗಳನ್ನು ಹೇಳಲಾಗುವುದಿಲ್ಲ.

2. ನಮ್ಮ ಕುಟುಂಬದ ವಂಶಾವಳಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿರುತ್ತೇನೆ. ಸಂಜೀವ ನನ್ನ ತಾತನ ತಾತ. ಸಂಜೀವನ ಹೆಂಡತಿಯ ಹೆಸರು ಮಾರಕ್ಕ. ಸಂಜೀವ ಮತ್ತು ಮಾರಕ್ಕರವರಿಗೆ ಹನುಮಂತಪ್ಪ ಎಂಬ ಒಬ್ಬನೇ ಮಗ. ಹನುಮಂತಪ್ಪನಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಚಿನ್ನಪ್ಪ ಮತ್ತು ವೆಂಕಪ್ಪ ಅಲಿಯಾಸ್ ಲಂಕಪ್ಪ. ಚಿನ್ನಪ್ಪ ತೀರಿಕೊಂಡಿರುತ್ತಾರೆ ಅವರಿಗೆ ರಾಮಯ್ಯ ಮತ್ತು ಅಂಜಪ್ಪ ಎಂಬ ಇಬ್ಬರು ಮಕ್ಕಳಿರುತ್ತಾರೆ. ರಾಮಯ್ಯ

ತೀರಿಕೊಂಡಿರುತ್ತಾರೆ, ಅವರಿಗೆ ಮಕ್ಕಳಿರುವುದಿಲ್ಲ. ವೆಂಕಪ್ಪ ಅಲಿಯಾಸ್ ಲಂಕಪ್ಪ ತೀರಿಕೊಂಡಿರುತ್ತಾರೆ ಅವರಿಗೆ ಮಕ್ಕಳಿರುವುದಿಲ್ಲ.

3. ಸಂಜೀವನ ಮಗ ಹನುಮಂತಪ್ಪ. ಹನುಮಂತಪ್ಪನ ಹೆಂಡತಿ ಹೆಸರು ಕದುರಮ್ಮ ಎಂದು ಸೂಚಿಸುವುದು ಸರಿಯಲ್ಲ ಸಾಕ್ಷಿ ಮುಂದುವರೆದು ತಿಮ್ಮಕ್ಕ ಎಂದು ಉತ್ತರಿಸಿರುತ್ತಾರೆ. ಸಂಜೀವನ ಮಗ ಹನುಮಂತಪ್ಪನಿಗೆ ರಾಮಕ್ಕ ಮತ್ತು ಹನುಮಂತಪ್ಪ ಎಂಬ ಇಬ್ಬರು ಮಕ್ಕಳು ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳು ಹನುಮಂತಪ್ಪ ಬಿನ್ ಹನುಮಂತಪ್ಪನ ಹೆಂಡತಿ ಮತ್ತು ಮಗ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಸದರಿ ಹನುಮಂತಪ್ಪನಿಗೆ ಮತ್ತು ನಮ್ಮ ತಾತನಿಗೆ ಯಾವುದೇ ಸಂಬಂಧ ಇಲ್ಲ ಎಂದು ಉತ್ತರಿಸಿರುತ್ತಾರೆ.

4. ಪ್ರತಿವಾದಿಗಳು ದಾವಾ ಸ್ವತ್ತಿನ ಮಾಲೀಕರು ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ಖಾತೆ ಪ್ರತಿವಾದಿಗಳ ಹೆಸರಿಗೆ ವರ್ಗಾವಣೆಯಾಗಿ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಎಂ.ಆರ್.30/1990-91 ರಂತೆ ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾವಣೆ ಯಾಗಿರುವುದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತೀರಿಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಮತ್ತು ನನ್ನ ತಂದೆಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಎಂ.ಆರ್ 30/1990-91 ರಂತೆ ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾವಣೆ ಯಾಗಿರುವುದನ್ನು ಪ್ರಶ್ನಿಸಿ ನಿಮ್ಮ ತಂದೆ ಸಲ್ಲಿಸಿದ್ದಂತಹ ಮೇಲ್ಮನವಿ ವಜಾ ಆಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ .

5. ದಾವಾ ಸ್ವತ್ತಿನಲ್ಲಿ ನಾವು ಕಡಲೆ ಮತ್ತು ತೊಗರಿ ಬೆಳೆ ಬೆಳೆದಿರುತ್ತೇವೆ. ದಾವಾ ಸ್ವತ್ತಿನಲ್ಲಿ 6 ಹುಣಸೆ ಮರಗಳಿರುತ್ತವೆ. ದಾವಾ ಸ್ವತ್ತಿನಲ್ಲಿರುವ ಹುಣಸೇಮರಗಳ ಫಸಲನ್ನು ಪ್ರತಿವಾದಿಗಳು ಕಟಾವು ಮಾಡುತ್ತಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ನಾವು ಸಾಗುವಳಿ ಮಾಡುತ್ತಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯ ಹೆಸರಿಗೆ ಖಾತೆ ವರ್ಗಾವಣೆ ಯಾಗಿರುವುದಿಲ್ಲ. ಪ್ರತಿವಾದಿ ಗಳು ದಾವಾ ಸ್ವತ್ತಿನಲ್ಲಿನ ಹುಣಸೇಮರಗಳ ಫಸಲನ್ನು ತೆಗೆದುಕೊಳ್ಳಲು ನಾವು ಅಡ್ಡಿ ಪಡಿಸಿದ್ದರಿಂದ ನಮ್ಮ ವಿರುದ್ಧ ಪ್ರತಿವಾದಿ ದೂರು ಸಲ್ಲಿಸಿದಾಗ ಪೊಲೀಸರು ಸ್ಥಳಕ್ಕೆ ಬಂದು ಪ್ರತಿವಾದಿಗಳು ಫಸಲನ್ನು ತೆಗೆದುಕೊಳ್ಳಲು ಅನುಕೂಲ ಮಾಡಿಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

6. ಪ್ರತಿವಾದಿಗಳು ದಾವಾ ಸ್ವತ್ತು ನಮಗೆ ಸೇರಿರುತ್ತದೆ ಎಂದು ತೊಂದರೆ ನೀಡಿದ್ದರಿಂದ ಈ ದಾವೆ ಹೂಡಿರುತ್ತೇವೆ. ನಾವು ಯಾವುದೇ ಸಮಯದಲ್ಲಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತು ನನ್ನ ಪಿತ್ರಾರ್ಜಿತ ಆಸ್ತಿ ಎಂಬುದಕ್ಕೆ ದಾಖಲೆಗಳನ್ನು ಹಾಜರುಪಡಿರುತ್ತೇನೆ. ದಾವಾ ಸ್ವತ್ತು ನನ್ನ ಪಿತ್ರಾರ್ಜಿತ ಆಸ್ತಿ ಎಂಬುದಕ್ಕೆ ಕಂದಾಯ ಪಾವತಿ ರಶೀದಿಗಳು ಮುತ್ತು ಮ್ಯುಟೇಷನ್ ಹಾಜರುಪಡಿರುತ್ತೇನೆ. ನಾನು ಹಾಜರುಪಡಿರುವಂತಹ ಮ್ಯುಟೇಷನ್ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

7. ಇಂದಿಗೂ ಪ್ರತಿವಾದಿಗಳೇ ದಾವಾ ಸ್ವತ್ತನ್ನು ಸಾಗುವಳಿ ಮಾಡಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಮೊದಲಿನಿಂದಲೂ ದಾವಾ ಸ್ವತ್ತಿನ ಖಾತೆ ಪ್ರತಿವಾದಿಗಳ ಪೂರ್ವಜರ ಹೆಸರಿನಲ್ಲಿ ಇತ್ತು, ಅವರ ನಂತರ ಪ್ರತಿವಾದಿಗಳ ಹೆಸರಿಗೆ ವರ್ಗಾವಣೆ ಯಾಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅವರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ದಾವಾ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ .